# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 15/2023**

| | | |
|---|---|---|
| ಸಾಕ್ಷಿದಾರರ ಹೆಸರು | : ರಾಜಣ್ಣ ಆರ್ | ಪಿಡಬ್ಲ್ಯೂ : 11 |
| ತಂದೆಯ / ಗಂಡನ ಹೆಸರು | : ರಂಗಶೆಟ್ಟಿ | ಪಿಡಬ್ಲ್ಯೂ : 15 |
| ವಯಸ್ಸು | : 56 ವರ್ಷ | |
| ಉದ್ಯೋಗ | : ಎ ಎಸ್ ಐ , ಆಲನಹಳ್ಳಿ ಪೊಲೀಸ್ ಠಾಣೆ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 14.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು 2013 ರಿಂದ 2021 ರವೆರೆಗೆ ನಾನು ಉದಯಗಿರಿ ಪೊಲೀಸ್ ಠಾಣೆ ಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.02.12.2020 ರಂದು ನಾನು ಹಗಲು ಕರ್ತವ್ಯದಲ್ಲಿ ಇದ್ದಾಗ, ಸಂಜೆ 05.00 ಗಂಟೆಗೆ ನಾನು ಠಾಣೆಗೆ ಬಂದಿರುತ್ತೇನೆ. ಆಗ ಚಾಸಾ.16 ಎಸ್ ಹೆಚ್ ಒ ರವರು ನನಗೆ ಯಾವುದೊ ಒಂದು ಹಲ್ಲೆಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೆಮೋ ಬಂದಿರುತ್ತದೆ. ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಹೋಗಿ ಗಾಯಳುವಿನ ಹೇಳಿಕೆ ಪಡೆದುಕೊಂಡು ಬರುವಂತೆ ನನಗೆ ತಿಳಿಸಿದರು. ನಂತರ ನಾನು 06.00 ಗಂಟೆ ಸುಮಾರಿಗೆ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಅಲ್ಲಿ ವೈದ್ಯರನ್ನು ಭೇಟಿ ಮಾಡಿರುತ್ತೇನೆ. ಅವರು ನನಗೆ

ಗಾಯಾಳುವನ್ನು ತೋರಿಸಿರುತ್ತಾರೆ. ಆಗ ಗಾಯಾಳುವಿನ ಹೆಸರು ಕೇಳಿದಾಗ ಆಕೆ ತನ್ನ ಹೆಸರು ಫರ್ಜಾನಾ ಬೇಗಂ, ಕೋಂ ಇಸ್ರಾರ್ ಪಾಷಾ ಎಂದು ಹೇಳಿರುತ್ತಾಳೆ. ನಂತರ ನಾನು ಏನಾಯಿತು ಎಂದು ವಿಚಾರಿಸಿರುತ್ತೇನೆ. ಅವರು ದಿ.01.12.2020 ರಂದು ಬೆಳಿಗ್ಗೆ 07.30 ರ ಸಮಯದಲ್ಲಿ ಕಸ ಗುಡಿಸುವ ವಿಚಾರಕ್ಕೆ ಮತ್ತು ನೀರಿನ ವಿಚಾರಕ್ಕೆ ಪಕ್ಕದ ಮನೆಯರಾದ ಅಯಬ್ ಖಾನ್ , ಅವರ ಹೆಂಡತಿ ಸಬಾನಾ ಹಾಗೂ ಮಗಳು ಶಿಫಾ ಸಣ್ಣ ಪುಟ್ಟ ವಿಚಾರಕ್ಕೆ ಜಗಳವಾಗಿ , ಅವ್ಯಾಚ್ಯ ಶಬ್ದಗಳಿಂದ ಬೈದಾಡಿಕೊಂಡು, ಅಯುಬ್ ತನ್ನ ಗಂಡನಿಗೆ ಕಬ್ಬಿಣದ ರಾಡ್ ನಿಂದ ತಲೆಗೆ ಹಲ್ಲೆ ಮಾಡಿರುತ್ತಾರೆ ಎಂದು, ನಂತರ 3 ಜನ ಆರೋಪಿತರು ಕಬ್ಬಿಣದ ರಾಡು ಮತ್ತು ಕಟ್ಟಿಗೆ ಸೌದೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು, ಅವರ ಗಂಡ ಕೆ ಆರ್ ಆಸ್ಪತ್ರೆಗೆ ಹೋಗಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡು, ನಂತರ ನಾಗರಾಜೇಗೌಡ ಆಸ್ಪತ್ರೆಗೆ ಬಂದು ದಾಖಲಾಗಿರುತ್ತಾರೆ ಎಂದು ತಿಳಿಸಿದರು. ಅದೇ ರೀತಿ ಇನ್ನೊಬ್ಬ ಸಾಕು ಮಗಳಿಗೆ ಅಯುಬ್ ಕಾಲಿನಿಂದ ಒದ್ದಿರುತ್ತಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಹೇಳಿಕ ನೀಡಿರುತ್ತಾರೆ. ಸದರಿ ಹೇಳಿಕೆಗೆ ಸಂಬಂಧಪಟ್ಟಂತೆ ವೈದ್ಯರು ಅವರ ಸಮಕ್ಷಮ ಎಂದು ದೃಢೀಕರಿಸಿದ್ದು, ನಂತರ ಸದರಿ ಹೇಳಿಕೆಯನ್ನು ತಂದು ಚಾಸಾ.16 ರವರಿಗೆ ನೀಡಿರುತ್ತೇನೆ. ಅದರ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಸಾಕ್ಷಿಯೂ ಗಾಯಾಳುವಿನ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1(ಸಿ) ಎಂದು ಗುರುತಿಸಲಾಯಿತು. ಸದರಿ ಹೇಳಿಕೆಗೆ ಗಾಯಾಳು ಫರ್ಜಾನಾ ಮತ್ತು ವೈದ್ಯರು ಸಹಿ ಮಾಡಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

3. ಚಾಸಾ.16 ರವರು ಗಾಯಾಳುವಿನ ಹೇಳಿಕೆ ಪಡೆದುಕೊಂಡು ಬರುವಂತೆ ಹೇಳಿದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಸದರಿ ಕರ್ತವ್ಯಕ್ಕೆ ಹೋಗುವ ಮುಂಚೆ ಠಾಣಾ ದಿನಚರಿಯಲ್ಲಿ ಬರೆದು ಹೋಗಿರುತ್ತೀರಿಯೇ ಎಂದರೆ ಸಾಕ್ಷಿಯೂ ಅದನ್ನು ಎಸ್ ಹೆಚ್ ಒ ರವರು ಬರೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನಚರಿಗೆ ಸಹಿ ಮಾಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

4. ನಾನು ಆಸ್ಪತ್ರೆಗೆ ಹೋದಾಗ 06.00–06.15 ಆಗಿತ್ತು. ನಾನು ಚಾಸಾ.2 ರವರ ಬಳಿ ಹೋಗಿರುತ್ತೇನೆ ಎಂದು ಹೇಳಿದ್ದು, ಅದಕ್ಕೂ ಮುಂಚೆ ಯಾವ ವೈದ್ಯರನ್ನು ಭೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯೂ ಅವರ ಹೆಸರು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಚಾಸಾ.2 ರವರ ಬಳಿ ಹೋಗಿರುತ್ತೇನೆ ಎಂದು ಹೇಳಿದ್ದು , ಆಗ , ಅವರ ಬಳಿ ಎಷ್ಟು ಜನರ ಇದ್ದರು ಎಂದರೆ ಸಾಕ್ಷಿಯೂ ನಾನು, ವೈದರು ಮತ್ತು ಗಾಯಾಳು ಇದ್ದೆವು ಎಂದು ನುಡಿಯುತ್ತಾರೆ. ಫರ್ಜಾನಾ ರವರ ಸಂಬಂಧಿಕರು ಸಹ ಅಲ್ಲಿ ಇದ್ದರು ಎಂದರೆ ಸಾಕ್ಷಿಯೂ ಇದ್ದರು ಆದರೆ ಅವರ ಹೆಸರನ್ನು ನಾವು ವಿಚಾರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಫಾರೂಕ್ ಪಾಷಾ ಚಾಸಾ.4 ರವರು ಫರ್ಜಾನಾ ರವರ ಬಳಿ ಇದ್ದರು ಎಂದರೆ ಸಾಕ್ಷಿಯೂ ನನಗೆ ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಫಾರೂಕ್ ಪಾಷಾರವರು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಯಾವ ವಿಭಾಗದಲ್ಲಿ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯೂ ಮಹಿಳಾ ವಾರ್ಡ್ ನ ವಿಭಾಗದಲ್ಲಿ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ಇಸ್ರಾರ್ ಪಾಷಾ ರವರು ಕೆ ಆರ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ನಾಗರಾಜೇಗೌಡ ಆಸ್ಪತ್ರೆಗೆ ಬಂದು ದಾಖಲಾಗಿರುತ್ತಾರೆ ಎಂದ ಹೇಳಿರುವ ವಿಚಾರವನ್ನು ನಿಪಿ.1 ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಿಂದ ಆಸ್ಪತ್ರೆ **5-6** ಕಿ.ಮೀ. ಅಂತರದಲ್ಲಿ ಇರುತ್ತದೆ. ಆಸ್ಪತ್ರೆಗೆ ಯಾರು ಯಾರು ಹೋಗಿರುತ್ತೀರಿ ಎಂದರೆ ಸಾಕ್ಷಿಯೂ ನಾನು ಒಬ್ಬನೆ ಹೋಗಿದ್ದೆ ಎಂದು ನುಡಿಯುತ್ತಾರೆ. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇನೆ. ಸದರಿ ವಾಹನದ ನಂಬರ್ **KA 09 R 3676** ಆಗಿರುತ್ತದೆ. ನಾನು ಸದರಿ ವಾಹನದಲ್ಲಿ ಆಸ್ಪತ್ರೆಗೆ ಬಂದಿರುತ್ತೇನೆ ಎಂದು ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

6. ಆಸ್ಪತ್ರೆಯಲ್ಲಿ ವೈದರ ಜೊತೆಗೆ ಬೇರೆ ಯಾರು ಇದ್ದರು ಎಂದರೆ ಸಾಕ್ಷಿಯೂ ಬೇರೆ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಗಾಯಾಳು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಪಾರೂಕ್ ಪಾಷಾ ಹೇಳಿಕೆ ನೀಡಿ, ಹೇಳಿಕೆಯನ್ನು ನನ್ನ ಕೈಯಲ್ಲಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಹೇಳಿಕೆ ದಾಖಲು ಮಾಡಿಕೊಳ್ಳದಿದ್ದರು ಸಹ, ಸತ್ಯಾಂಶ ಮುಚ್ಚಿ ಇಡಲು ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**